ಎಳೆದರೆ ಮತ್ತೊಂದು ಕಡೆ, ಮತ್ತೊಂದು ಕಡೆ ಎಳೆದರೆ ಇನ್ನೊಂದು ಕಡೆ ಮಳೆಯ ನೀರು ಗಾಳಿಯಿಂದ ಶೆಲ್ಟರಿನಲ್ಲಿದ್ದ ಅವಳಿಗೆ ಸಿಡಿಯುತ್ತಿದ್ದವು. ಮಳೆಯಿಂದ ತಪ್ಪಿಸಿಕೊಳ್ಳಲು ಅವಳೆಷ್ಟೇ ಪ್ರಯತ್ನಿಸಿದರೂ ತೋಯಿಸಿಕೊಳ್ಳದೆ ಇರಲು ಆಗಲಿಲ್ಲ. ಆ ಕಾರಣದಿಂದ ಅವಳು ನಡುಗುತ್ತಲೇ ಅಲ್ಲಿ ಕೂತಿದ್ದಳು. ಮಳೆ ಮೋಡದಿಂದ ಕತ್ತಲು ಗವ್ವೆನ್ನುವಂತೆ ಆಗಿತ್ತು. ಜೋರು ಮಳೆಗೆ ಬೀದಿ ದೀಪಗಳು ಇಲ್ಲವಾಗಿ ಅಂಧಕಾರವೇ ತಾಂಡವವಾಡುತ್ತಿತ್ತು. ಆಗಾಗ ಮಿಂಚುವ ಬೆಳಕಿನಲ್ಲಿ ತಾರಾ ನಡುಗುತ್ತ ಕುಳಿತಿದ್ದು ಕಾಣುತ್ತಿತ್ತು. ಆಕಾಶಕ್ಕೆ ತೂತು ಬಿದ್ದಂತೆ ಮಳೆ ಜೋರಾಗಿ ಬೀಳುತಿತ್ತು. ಪಾಪ.. ತಾರಾ ಅಂತಹ ಮಳೆ, ಭಯಾನಕ ಕತ್ತಲಲ್ಲಿ ಕುಳಿತಿದ್ದಳು. ರಸ್ತೆಯೆಲ್ಲ ನಿರ್ಜನವಾಗಿತ್ತು. ಆಗಾಗ ವಾಹನಗಳು ತಮ್ಮ ಪಾಡಿಗೆ ತಾವು ಹೋಗುತ್ತಿದ್ದವು.

ಆಗಲೇ ಬಂದಿದ್ದು, ಆ ಕೀಚಕರ ಗುಂಪು. ಅದರಲ್ಲಿ ಕೆಲವೊಬ್ಬರು ಕುಡಿದು ತೂರಾಡುತ್ತಿದ್ದರೆ, ಇನ್ನೂ ಕೆಲವರು ಅಶ್ಲೀಲವಾಗಿ ಹಾಡುತ್ತಾ ಅವಳ ಸುತ್ತುವರೆದರು. ಏನು..ಎಂತು ಅರಿಯದ ತಾರಾಳ ಮೇಲೆ ಬಿದ್ದು ಮೃಗೀಯ ವರ್ತನೆ ತೋರುತ್ತಾ ಅವಳನ್ನು ಹಾಳು ಮಾಡುತ್ತಿದ್ದರೆ ಈ ಪಾಪಿ ಕಣ್ಣುಗಳಿಂದ ನೋಡುತ್ತಾ ಬೇಡಿ ಬೇಡಿರೆಂದು ನಾನೆಷ್ಟು ಕೂಗಿದರೂ ನನ್ನ ಮೂಕ ಕೂಗು ಕೇಳಲಿಲ್ಲ ಆ ಕಾಮಾಂಧರಿಗೆ. ಪಾಪ ಮಗು ಅದೆಷ್ಟು ಕೊಸರಾಡಿ ಓಡಿ ಹೋಗಬೇಕೆಂದರೂ ಅವಳನ್ನು ಬಿಡದೆ ಹೂವಿನಂತೆ ಹೊಸಕಿ ಹಾಕಿದರು. ಆ ಮಗು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಕಟುಕರಿಗೆ ಕರುಣೆಯೇ ಬರಲಿಲ್ಲ. ಆ ಗುಡುಗು, ಸಿಡಿಲಿನಲ್ಲಿ ಅವಳ ಕೂಗು ಕೇಳದಾಯಿತು, ಮಳೆಯಲ್ಲಿ ಆಕೆಯ ಕಣ್ಣೀರು ಕಾಣದಾಯಿತು. ಆ ಘೋರ ಕೃತ್ಯವನ್ನು ತಪ್ಪಿಸಲಾರದೆ ನಾನು ಕೇವಲ ಮೂಕರೋದನೆ ಪಟ್ಟೆ. ನಂತರ ಆ ಪ್ರಕರಣ ಬೆಳಕಿಗೆ ಬಂದರೂ ಏನೂ ಆಗದಿದ್ದಾಗ ನೀವೇ ಮುಂದೆ ನಿಂತು ನಿಮ್ಮ ಮುಂದಾಳತ್ವದಲ್ಲಿ ಪ್ರತಿಭಟನೆ ಮಾಡಿ ಪ್ರಕರಣವನ್ನು ನ್ಯಾಯಾಲಯ ಕಟ್ಟೆ ಹತ್ತುವಂತೆ ಮಾಡಿದಿರಿ. ಆ ಚಂಡಾಲರಿಗೆ ಶಿಕ್ಷೆ ಕೊಡಿಸಿ ತಾರಾ ಆತ್ಮಕ್ಕೆ ಶಾಂತಿ ಕೊಡಿಸಿದಿರಿ.

ಆ ನಂತರ ಕಳೆದ ವರ್ಷ ನಡೆದ ಘಟನೆ ಇದೆಯಲ್ಲ ನಿಜಕ್ಕೂ ನಾಗರಿಕ ಸಮಾಜ ತಲೆ ತಗ್ಗಿಸುವಂತಹದ್ದು. ಮನುಷ್ಯನ ಆಸೆಗೆ ಕೊನೆಯೇ ಇಲ್ಲವೇ...? ಆಸ್ತಿಯ ಕಾರಣಕ್ಕಾಗಿ ಅಣ್ಣ ಗೋಪಾಲ ತನ್ನ ಸ್ನೇಹಿತ ವಿಜಯನೊಂದಿಗೆ ಸೇರಿ ತಮ್ಮನಾದ ಪ್ರಕಾಶನನ್ನು ಈ ಸರ್ಕಲಿನಲ್ಲಿಯೇ ಕಾರನ್ನು ಹತ್ತಿಸಿ ಕೊಂದನಲ್ಲಾ... ಎಲ್ಲಿ ಹೋಗಿದೆ ಈ ನೆಲದ ಭ್ರಾತೃತ್ವದ ಪ್ರೇಮ. ಇಷ್ಟಕ್ಕೂ ಈ ಪ್ರಕರಣದಲ್ಲಿ ಕೊಲೆಯಾದ ಪ್ರಕಾಶನದು ಎಳ್ಳಷ್ಟೂ ತಪ್ಪೇ ಇರಲಿಲ್ಲ. ಆದರೆ, ಆ ಅಮಾಯಕ ಕಾರಿನಡಿ ಸಿಕ್ಕಿ ಬಲಿಯಾಗಿ ಬಿಟ್ಟ.

ಗೋಪಾಲ ಮತ್ತು ಪ್ರಕಾಶ ಒಡಹುಟ್ಟಿದವರು. ಅವರ ತಂದೆ ಮಹಾದೇವಪ್ಪ ತಮಗೆ ಪೂರ್ವಜರಿಂದ ಬಂದ ಜಮೀನು, ಹಾಗೆಯೇ ತನ್ನ ಅವಧಿಯಲ್ಲಿ ಕೊಂಡ ಜಮೀನು ಸೇರಿದಂತೆ ನಲವತ್ತು ಎಕರೆ ಜಮೀನು ಹೊಂದಿದ್ದರು. ನೀರಾವರಿ ಇದ್ದುದರಿಂದ ಪ್ರತಿವರ್ಷ ಉತ್ತಮ ಫಸಲೇ ಬರುತ್ತಿತ್ತು. ಇಬ್ಬರು ಮಕ್ಕಳನ್ನು ಓದಿಸಿ ನೌಕರಿ ಮಾಡಿಸಬೇಕೆಂಬ ಹಂಬಲ ಹೊಂದಿದ್ದವರು. ಅದರಂತೆ ಪ್ರಕಾಶ ಕಷ್ಟಪಟ್ಟು ಚೆನ್ನಾಗಿ ಓದಿ ನೌಕರಿಯನ್ನು ಹಿಡಿದ. ಆದರೆ, ಗೋಪಾಲ ಮಾತ್ರ ಕೆಟ್ಟ ದಾರಿಯಲ್ಲಿ ನಡೆದ. ಕಾಲಘಟ್ಟದಲ್ಲಿ ಮಹಾದೇವಪ್ಪ ತೀರಿಕೊಂಡಾಗ ಆಸ್ತಿಯು ಇಬ್ಭಾಗ ಮಾಡಬೇಕೆಂದು ಗೋಪಾಲ ತೀರ್ಮಾನಿಸಿದಾಗ ಅದಕ್ಕೆ ಪ್ರಕಾಶ ಒಪ್ಪಲಿಲ್ಲ. ಬದಲಾಗಿ ಎಲ್ಲ ಜಮೀನನ್ನು ನೀನೆ ಮಾಡಿಕೊಂಡು ಹೋಗು, ಸಾಧ್ಯವಾದರೆ ಬೆಳೆದಿರುವುದರಲ್ಲಿ ಕಾಳು-ಕಡಿ ಕೊಡು ಎಂದು ಹೇಳಿದ. ಆ ವೇಳೆಯಲ್ಲಿಯೇ ಶುರುವಾಯಿತು ನೋಡಿ ದಾಯಾದಿ ಕಲಹ.

ಕೆಟ್ಟ ಚಟಗಳ ದಾಸನಾಗಿದ್ದ ಗೋಪಾಲ ಒಂದೊಂದೆ ಜಮೀನುಗಳನ್ನು ಮಾರಲಿಕ್ಕೆ ಪ್ರಾರಂಭಿಸಿದ. ಆ ರೀತಿ ಮಾಡುವುದು ತರವಲ್ಲ. ಇರುವ ಎಲ್ಲ ಭೂಮಿಯನ್ನು ಚೆನ್ನಾಗಿ ನಿರ್ವಹಿಸಿಕೊಂಡು ಹೋಗುವಂತೆ ಪ್ರಕಾಶ ಪದೇ ಪದೇ ಹೇಳಿದ. ಆದರೆ, ಆತನ ಮಾತನ್ನು ಕೇಳದೆ ಹೋದ ಗೋಪಾಲ ತನ್ನ ಚಾಳಿಯನ್ನು ಮುಂದುವರಿಸಿದ. ಅದನ್ನು ಪ್ರಕಾಶ ಪ್ರಶ್ನಿಸಿದ್ದೇ ತಪ್ಪಾಯಿತು. ಇದರಿಂದ ಪ್ರಕಾಶ ಒಂದು ದಿನ ಈ ಸರ್ಕಲ್‌ನ್ನು ಬಳಸಿ ಹೋಗುತ್ತಿರುವಾಗ ಗೋಪಾಲ ತನ್ನ ಸ್ನೇಹಿತ ವಿಜಯನೊಂದಿಗೆ ತನ್ನ ಕಾರಿನಲ್ಲಿ ವೇಗವಾಗಿ ಬಂದು ಅವನ ಮೇಲೆ ಹರಿಸಿದ. ನೋಡು ನೋಡುತ್ತಿದ್ದಂತೆ ಪ್ರಕಾಶ ಅಲ್ಲಿಯೇ ಹೆಣವಾಗಿ ಬಿದ್ದಿದ್ದ. ಅನ್ಯಾಯಕ್ಕೆ ಕೊನೆಯೇ ಇಲ್ಲವೇ..? ಏನೂ